2) ಅಂಚೆಪಾಳ್ಯದಲ್ಲಿರುವುದು 66:11 ಕೆವಿ ವಿದ್ಯುತ್ ಉಪ ಕೇಂದ್ರದ ಸಾಮರ್ಥ್ಯವನ್ನು ಹೆಚ್ಚಳಗೊಳಿಸಲು ಉದ್ದೇಶಿಸಿದೆ. ಸದರೀ ಉಪವಿದ್ಯುತ್ ಕೇಂದ್ರದಲ್ಲಿ 89ಎಂವಿಎ ಸಾಮರ್ಥ್ಯದ ಪವರ್ ಟ್ರಾನ್ಸಫಾರ್ಮರ್‌ನ್ನು ಹೆಚ್ಚುವರಿಯಾಗಿ ಸ್ಥಾಪಿಸಲು ಉದ್ದೇಶಿಸಿದೆ.

3. ಕುಣಿಗಲ್ ತಾಲ್ಲೂಕಿನಾದ್ಯಂತ ವಿದ್ಯುತ್ ಸರಬರಾಜಿನ ತುಮಕೂರು ತಾಲ್ಲೂಕಿನ ಮಳೇಕೋಟೆ ಗ್ರಾಮದಿಂದ

ಹೆಬ್ಬೂರ್ - ಮಾರ್ಗವಾಗಿ ಅಂಚೇಪಾಳ್ಯದವರೆಗೆ 66ಕೆವಿ ಡಬಲ್ ಸರ್ಕ್ಯೂಟ್ ವಿದ್ಯುತ್ ಪ್ರಸಾರಣಾ ಮಾರ್ಗದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಮಾರ್ಚ್ 96ರ ಅಂತ್ಯದ ವೇಳೆಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ನಿರೀಕ್ಷೆ ಇದೆ.

ವಿಷಯ:ರಾಜ್ಯದಲ್ಲಿ ತ್ರಿವರ್ಣ ಕಾರ್ಡುಗಳನ್ನು ಹೊಸದಾಗಿ ಮುದ್ರಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 156(178)

ಶ್ರೀರಾಮಲಿಂಗಾರೆಡ್ಡಿ(ಜಯನಗರ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ.

ಅ) ರಾಜ್ಯದಲ್ಲಿ ತ್ರಿವರ್ಣ ಕಾರ್ಡುಗಳನ್ನು ಎಷ್ಟು ಜನರಿಗೆ ಸರ್ಕಾರವದರು ಕೊಟ್ಟಿರುತ್ತಾರೆ.

ಆ) ಅವುಗಳ ಪೈಕಿ, ಬೆಂಗಳೂರಿನಲ್ಲಿ ಎಷ್ಟು ಜನರಿಗೆ ಈ ಕಾರ್ಡುಗಳನ್ನು ಹಂಚಲಾಗಿದೆ.

ಇ) ಈ ತ್ರಿವರ್ಣ ಕಾರ್ಡುಗಳನ್ನು ಬದಲಿಸಿ ಹೊಸದಾಗಿ ಹಸಿರು ಬಣ್ಣದ ಕಾರ್ಡುಗಳನ್ನು ನೀಡಲು ಸರ್ಕಾರ ಯೋಜಿಸಿದ್ದಾರೆಯೇ,

ಈ) ಹಾಗಿದ್ದಲ್ಲಿ ಹೊಸದಾಗಿ ಈ ಕಾರ್ಡುಗಳನ್ನು ಮುದ್ರಿಸಲು ವೆಚ್ಚವೆಷ್ಟು.

ಉ) ಈ ಕಾರ್ಡುಗಳನ್ನು ಬದಲಿಸಲು ಕಾರಣಗಳೇನು?

ಊ) ಈ ಕಾರ್ಡುಗಳಲ್ಲಿ ನೀಡುವ ಆಹಾರ ಸಾಮಗ್ರಿಗಳಿಗೆ ಕೇಂದ್ರದಿಂದ ಸಹಾಯಧನ ಬರುತ್ತಿದೆಯೇ.

ಋ) ಈ ಹೊಸ ಬಣ್ಣದ ಹಸಿರು ಕಾರ್ಡುಗಳನ್ನು ಸರ್ಕಾರವದರು ಯಾವಾಗ ವಿತರಿಸುತ್ತಾರೆ.

ಶ್ರೀ. ಎಸ್. ನಂಜಪ್ಪ
ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.

ಅ) 51,71,691

ಆ) 37,060

ಇ) ಹೌದು ತ್ರಿವರ್ಣ ಪಡಿತರ ಚೀಟಿಗಳ ಬದಲಿಗೆ ಹಸಿರು ಪಡಿತರ ಚೀಟಿಗಳನ್ನು ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಪ್ರಸ್ತಾವನೆ ಪರಿಶೀಲನೆಯಲ್ಲಿರುವುದರಿಂದ ಈ ಮಾಹಿತಿಯು ಸದ್ಯಕ್ಕೆ ಲಭ್ಯವಿರುವುದಿಲ್ಲ.

ಉ) ಈಗ ವಿತರಣೆಯಾಗಿರುವ ತ್ರಿವರ್ಣ ಪಡಿತರ ಚೀಟಿಗಳಲ್ಲಿ ಹಾಳೆಗಳು ಮುಗಿಯುತ್ತಾ ಬಂದಿರುವುದರಿಂದ ಹಾಗೂ ಖೋಟ್ಟೆ ಪಡಿತರ ಚೀಟಿಗಳನ್ನು ಬದಲಾಯಿಸಲು ಉದ್ದೇಶಿಸಿದೆ.

ಊ) ಇಲ್ಲ.

ಋ) ದಿನಾಂಕ:1.4.1995ರಿಂದ ಹಸಿರು ಕಾರ್ಡುಗಳನ್ನು ವಿತರಿಸುವ ಕ್ರಮ ಕೈಗೊಳ್ಳಲಾಗಿದೆ.

ವಿಷಯ:ಜಯನಗರದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಕಛೇರಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:158(179)

ಶ್ರೀರಾಮಲಿಂಗ ರೆಡ್ಡಿ(ಜಯನಗರ)

ಮಾನ್ಯ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಬೆಂಗಳೂರು ಜಯನಗರ ಹಾಗೂ ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿರತಕ್ಕ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು.

ಆ) ಈ ಅಂಗಡಿಗಳು ಚಾಮರಾಜಪೇಟೆಯಲ್ಲಿರುವ ದಕ್ಷಿಣವಲಯ ಕಛೇರಿಯ ಅಧೀನದಲ್ಲಿ ಬರುವುದೇ ನಿಜವೇ?

ಇ) ದಕ್ಷಿಣವಲಯ ಕಛೇರಿಯ ಅಧೀನದಲ್ಲಿ ಬರತಕ್ಕ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು.

ಈ) ನಾಗರೀಕರಿಗೆ ಅನುಕೂಲವಾಗಲು ಹಾಗೂ ವಿಳಂಬವನ್ನು ತಪ್ಪಿಸಲು ಜಯನಗರದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜುವಲಯ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ.

ಶ್ರೀ. ಎಸ್. ನಂಜಪ್ಪ

ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.

ಅ) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ನ್ಯಾಯ ಬೆಲೆ ಅಂಗಡಿಗಳ ವಿವರ: